ಬಿಟ್ಟು ಹೋಗಿದ್ದಾರೆ. ನಾನು ಅಲ್ಲಿಗೆ ಹೋಗಬೇಕೆಂದರೆ ಶಿಡ್ಲಘಟ್ಟದಲ್ಲಿ ರೋಷನ್‌ಬೇಗ್ ಮತ್ತಿತರರಿಗೆ ಆದ ಗತಿಯೇ ನನಗೂ ಆದಿತೆಂಬ ಹೆದರಿಕೆಯಿಂದ ನಾನು ಅಲ್ಲಿಗೆ ಹೋಗಿಲ್ಲ ಮೇಲಾಗಿ ಪೋಲೀಸು ಅಧಿಕಾರಿಗಳು ನನ್ನ ವಿರೋಧ ಕತ್ತಿ ಮಸೆಯುತ್ತಿದ್ದಾರೆ. ಅಲ್ಲಿನ ಜನ ವಿರೋಧಿ ಎಸ್.ಪಿ., ಸಿ.ಪಿ.ಐ., ಪಿ.ಎಸ್.ಐ., ರವರನ್ನು ಅಲ್ಲಿಂದ ವರ್ಗಾಯಿಸುವಂತೆ ನಾನು ಲಿಖಿತ ಮೂಲಕ ಕೇಳಿಕೊಂಡರೂ ಏನೂ ಪ್ರಯೋಜನವಾಗಿಲ್ಲ. ನಮ್ಮ ಪಕ್ಷದ ಕಾರ್ಯಕರ್ತರನ್ನು ಸದೆಬಡಿಯುವುದೇ ಅವರ ಉದ್ಯೋಗವಾಗಿದೆ. ಕೋಮುಗಲಭೆ ತಣ್ಣಗಾಗಿದ್ದರೂ ಪೋಲೀಸರ ಹಾವಳಿ ನಿರಂತರವಾಗಿ ಮುಂದುವರಿದಿದೆ. ಗಾಯಗೊಂಡವರಿಗೆ ಹಾನಿಗೊಳಗಾದವರಿಗೆ ಈವರೆಗೆ ಯಾವುದೇ ಪರಿಹಾರ ಒದಗಿಸಿಲ್ಲ. ಗಲಭೆ ಹೆಚ್ಚಿಸಿದವರೆಲ್ಲ ಹೊರಗಿದ್ದು ನಿರಪರಾಧಿಗಳು ಹಿಂಸೆಗೊಳಗಾಗಿದ್ದಾರೆ. ಗಲಭೆ ಮುನ್ಸೂಚನೆಯಿದ್ದರೂ ಅದನ್ನು ನಿಯಂತ್ರಿಸಲು ಅಸಮರ್ಥರಾದ ಮತ್ತು ನಂತರ ನಮ್ಮ ಪಕ್ಷದ ಕಾರ್ಯಕರ್ತರಿಗೆ ಹಿಂಸೆ ಕೊಟ್ಟ ಪೋಲೀಸ್ ಅಧಿಕಾರಿಗಳನ್ನು ಶಿಕ್ಷಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಗೃಹಮಂತ್ರಿಗಳ (ಮುಖ್ಯಮಂತ್ರಿಗಳ) ಗಮನ ಸೆಳೆಯುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮುಖ್ಯಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಇವತ್ತೇ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೆ, ಅನಿವಾರ್ಯವಾಗಿ ನಾಳೆ ನಿಲ್ಲಿಗೆ ಉತ್ತರ ಹೇಳುತ್ತೇನೆ.

7. ರಾಜ್ಯದಲ್ಲಿ ಹಲವಾರು ಇಲಾಖೆಗಳಲ್ಲಿ ದಿನಗೂಲಿಗಳಾಗಿ ಕೆಲಸ ಮಾಡುತ್ತಿರುವ ನೌಕರರ ಸೇವೆಯನ್ನು ಖಾಯಂ ಗೊಳಿಸುವುದು.

ಶ್ರೀ ಜಿ.ಎಸ್. ಬಸವರಾಜ್.—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಹಲವಾರು ಇಲಾಖೆಗಳಲ್ಲಿ ಹಲವಾರು ವರ್ಷಗಳಿಂದ, ಹಲವಾರು ನೌಕರರು ದಿನಗೂಲಿಗಾಗಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಖಾಯಂ ಮಾಡಬೇಕೆಂದು ಹಲವಾರು ಮನವಿ ಬಂದಿದೆ. ಹಲವಾರು ಭಾರಿ ಧರಣಿ ಸತ್ಯಾಗ್ರಹ ನಡೆದಿದೆ. ಹಲವಾರು ಶಾಸಕರು ಹಲವಾರು ಭಾರಿ ಸರ್ಕಾರದ ಗಮನಕ್ಕೆ ತಂದಿದ್ದಾರೆ. ದಿನಗೂಲಿ ನೌಕರರನ್ನು ಖಾಯಂಗೊಳಿಸುವ ಕುರಿತು ನ್ಯಾಯಾಲಯ ಸಹ ಆದೇಶವಿತ್ತಿದೆ. ಆದರೆ ಸರ್ಕಾರದ ಆಶ್ವಾಸನೆಗೂ ಆಚರಣೆಗೂ ಅಜಗಜಾಂತರ ವ್ಯತ್ಯಾಸವಿದೆ. ಕೆಲಸ ಖಾಯಂಗೊಳ್ಳುವ ಮರೀಚಿಕೆಯನ್ನು ನಂಬಿದ ದಿನಗೂಲಿ ನೌಕರರ ಭಾವನೆ ಅತ್ಯಂತ ಶೋಚನೀಯ. ಉದಾಹರಣೆಗೆ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಹಂಗಾಮಿಕಟ್ಟೆ ಕಡವಿನಲ್ಲಿ ಕಳೆದ ಎಂಟು ವರ್ಷಗಳಿಂದಲೂ ದಿನಗೂಲಿ ಆಗಿ ದುಡಿಯುತ್ತಿರುವ ಶ್ರೀ ರಾಜು ಕೆ ಸುಂದರ್ ಮತ್ತು ಶ್ರೀ ಕೃಷ್ಣವಿ ನಾಯ್ಕ, ಅವರ ಬದುಕಿನ ಭಾವನೆ–ಬಿಳಿಯಲ್ಲೇ ಇರುವ ನನಗೆ ಗೊತ್ತು. ಇಂತಹ ಸಹಸ್ರಾರ ನೌಕರರು ವಿವಿಧ ಇಲಾಖೆಗಳಲ್ಲಿ ಅನೇಕ ವರ್ಷಗಳಿಂದ ದುಡಿಯುತ್ತಿದ್ದು, ಅವರನ್ನು ಆದಷ್ಟು ಬೇಗ ಖಾಯಂ ನೇಮಕ ಮಾಡಬೇಕಾಗಿ ಒತ್ತಾಯಿಸುತ್ತೇನೆ.

೧-೦೦ ಪಿ.ಎಂ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಜಿ.ಎಸ್. ಬಸವರಾಜು ಅವರು ನಿಯಮ ೫೩ರಲ್ಲಿ ಕೆಳಗೆ ಪ್ರಸ್ತಾಪ ಮಾಡಿರತಕ್ಕ ವಿಷಯದಲ್ಲಿ ಈ ಕೆಳಕಂಡ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲಾ ಲೋಕೋಪಯೋಗಿ ಇಲಾಖಾ ಯೂನಿಯನ್ ಮತ್ತು ಇತರೆ ನಾಲ್ಕು ಸಂಘಗಳು ದಿನಗೂಲಿ ಕೆಲಸಗಾರರನ್ನು ಖಾಯಂಗೊಳಿಸಬೇಕೆಂತಲೂ ಮತ್ತು ಅವರಿಗೆ ಸರ್ಕಾರಿ ನೌಕರರಿಗೆ ಕೊಡುತ್ತಿರುವಂತಹ ವೇತನವನ್ನು ಮಂಜೂರು ಮಾಡುವಂತೆ ಕೋರಿ ಮೇ ೧೯೮೩ರಲ್ಲಿ ಸರ್ವೋನ್ನತ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿತ್ತು. ದಿನಗೂಲಿ ಕೆಲಸಗಾರರನ್ನು ಕೆಲಸದಿಂದ ತೆಗೆಯಕೂಡದೆಂದು ದಿನಾಂಕ ೨೫–೭–೧೯೮೩ರಂದು ಸರ್ವೋನ್ನತ ನ್ಯಾಯಾಲಯವು ಏಕಪಕ್ಷೀಯ ಮಧ್ಯಂತರಿಕ ಆದೇಶವನ್ನು ನೀಡಿತು. ಆದಾಗ್ಯೂ ಸಹ ಲೋಕೋಪಯೋಗಿ ಇಲಾಖೆಯಲ್ಲಿ ಬಹಳಷ್ಟು ಜನ ದಿನಗೂಲಿ ಕೆಲಸಗಾರರನ್ನು ಕೆಲಸದಿಂದ ತೆಗೆದುಹಾಕಿದುದು

ನ್ಯಾಯಾಲಯದ ಆದೇಶದ ನಿಂದನೆಗೆ ಕಾರಣವಾಯಿತು. ಈ ನ್ಯಾಯಾಲಯದ ನಿಂದನೆಯ ಮನವಿಯನ್ನು ಸರ್ವೋನ್ನತ ನ್ಯಾಯಾಲಯವು ಪರಿಶೀಲಿಸಿ, ದಿನಾಂಕ ೨೫–೭–೧೯೮೫ರಂದು ಕೆಲಸದಲ್ಲಿದ್ದು ಆನಂತರ ಕೆಲಸಕ್ಕೆ ಹಾಜರಾಗದ ಎಲ್ಲಾ ಕೆಲಸಗಾರರನ್ನು ಅವರು ದಿನಾಂಕ ೨೧–೧೦–೧೯೮೬ರಂದು ಅಥವಾ ಅದಕ್ಕೆ ಮೊದಲು ಕೆಲಸಕ್ಕೆ ಹಾಜರಾದರೆ ಅಂತಹವರನ್ನು ಪುನರ್ ನೇಮಿಸಿಕೊಂಡು ಅವರಿಗೆ ಹಿಂದಿನ ವೇತನವನ್ನು ಕೊಡಬೇಕೆಂದು ದಿನಾಂಕ ೧೭–೧೨–೧೯೮೫ರಂದು ಆದೇಶ ನೀಡಿತು.

ಸರ್ವೋನ್ನತ ನ್ಯಾಯಾಲಯದ ಆದೇಶದಲ್ಲಿಯ ನಿರ್ದೇಶನದ ಮೇರೆಗೆ ಅರ್ಹರಿರುವ ದಿನಗೂಲಿ ನೌಕರರನ್ನು ಮರು ನೇಮಕ ಮಾಡಿಕೊಳ್ಳಬೇಕೆಂದು ಸೂಚನೆ ನೀಡಲಾಯಿತು. ಅದರಂತೆ ಸಂಬಂಧಪಟ್ಟ ಇಲಾಖೆಗಳು ಅರ್ಹರಿರುವ ದಿನಗೂಲಿ ನೌಕರರನ್ನು ಮರು ನೇಮಕ ಮಾಡಿಕೊಂಡಿದೆ. ದಿನಗೂಲಿ ನೌಕರರನ್ನು ಖಾಯಂ ಮಾಡಿಕೊಳ್ಳುವ ಬಗ್ಗೆ ನ್ಯಾಯಾಲಯದಿಂದ ಯಾವುದೇ ಆದೇಶವು ಬಂದಿಲ್ಲ. ಮುಖ್ಯ ರಿಟ್ ಅರ್ಜಿಯನ್ನು ಸರ್ವೋನ್ನತ ನ್ಯಾಯಾಲಯದ ಅಂತಿಮ ತೀರ್ಪು ಬಂದ ನಂತರ ದಿನಗೂಲಿ ನೌಕರರನ್ನು ಖಾಯಂ ಮಾಡುವ ಬೇಡಿಕೆಯನ್ನು ಪರಿಶೀಲಿಸಲಾಗುವುದು.

೮. ರಾಯಚೂರಿನ ಮಾರುಕಟ್ಟೆ ಆವರಣದಲ್ಲಿ ನಡೆಯುತ್ತಿರುವ ಕಳ್ಳತನಗಳನ್ನು ತಡೆಗಟ್ಟುವ ಬಗ್ಗೆ

ಶ್ರೀ ವಿಜ್ಜಾರಿ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೇ, ರಾಯಚೂರು ಮಾರುಕಟ್ಟೆ ಸಮಿತಿಯು ಇಡೀ ರಾಜ್ಯದಲ್ಲೇ ಹೆಚ್ಚಿನ ವ್ಯವಹಾರ ನಡೆಸತಕ್ಕ ಮಾರುಕಟ್ಟೆ ಸಮಿತಿಯಾಗಿದೆ ಮಾರುಕಟ್ಟೆ ಸಮಿತಿಯ ಬಡಾವಣೆಗೆ ರೈತರು ತಾವು ಬೆಳೆದಿರುವ ಹತ್ತಿ, ಶೇಂಗಾ ಹಾಗೂ ಇನ್ನಿತರ ಮಾಲನ್ನು ತಂದಮೇಲೆ, ಮಾರುಕಟ್ಟೆ ಸಮಿತಿಯ ಆವರಣದಲ್ಲಿ ಸಮಾಜ ಕಂಟಕರು, ಕಳ್ಳರು, ರೈತರು ತಂದಿರುವ ಮಾಲನ್ನು ಲೂಟಿ ಮಾಡುತ್ತಿದ್ದು ಇದರಿಂದ ವ್ಯಾಪಾರಸ್ಥರೂ ಮತ್ತು ರೈತರು ಲಕ್ಷಾವಧಿ ರೂಪಾಯಿಗಳ ನಷ್ಟವನ್ನು ಅನುಭವಿಸಬೇಕಾಗಿದೆ. ಈ ಕಳ್ಳರು ಯಾರಿಗೂ ಅಂಜತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಪೋಲೀಸ್ ಇಲಾಖೆಯವರು ಹಲವಾರು ರೀತಿಯಲ್ಲಿ ಪ್ರಯತ್ನ ಮಾಡಿದರೂ ಕೂಡಾ ಪೋಲೀಸ್ ಇಲಾಖೆಗೂ ಕೂಡ ಇವರನ್ನು ಹತೋಟಿಗೆ ತರಲು ಅಸಾಧ್ಯವಾಗಿದೆ. ಕಾರಣ ಲಕ್ಷಾಂತರ ರೂಪಾಯಿ ಬೆಲೆಬಾಳುವ ಹತ್ತಿ ಹಾಗೂ ದವಸಧಾನ್ಯವನ್ನು ಲೂಟಿ ಮಾಡುತ್ತಿರುವ ಈ ಕಳ್ಳರನ್ನು ಬಗ್ಗು ಬಡಿಯಲು ವಿಶೇಷ ದಳದ ವ್ಯವಸ್ಥೆ ಮಾಡಿ ಮಾರುಕಟ್ಟೆ ಸಮಿತಿಯ ಆವರಣದಲ್ಲಿ ಹಾಗೂ ಹೊರಗಡೆ ರೈತರಿಗೆ ಹಾಗೂ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ತಡೆಹಿಡಿಯುವುದರಲ್ಲಿ ಸರ್ಕಾರದ ಗಮನ ಸೆಳೆಯುತ್ತಾ ಮಾನ್ಯ ಗೃಹಮಂತ್ರಿಗಳು ಹೇಳಿಕೆ ನೀಡುವಂತೆ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರ ಹಾಗೂ ರೇಷ್ಮೆ ಖಾತೆ ಮಂತ್ರಿಗಳು). ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ರಾಯಚೂರಿನ ಮಾರುಕಟ್ಟೆ ಆವರಣದಲ್ಲಿ ಕಳ್ಳತನಗಳು ನಡೆಯುತ್ತಿವೆಂದು, ಆದುದರಿಂದ ಹೊಸ ಪೋಲೀಸ್ ಠಾಣೆಯ ಅಲ್ಲಿ ಸ್ಥಾಪಿಸಬೇಕೆಂದು ಅಲ್ಲಿನ ವ್ಯಾಪಾರಸ್ಥರಿಂದ ಮನವಿ ಬಂದಿದೆ. ದಿನಾಂಕ ೧೦–೯–೮೭ರಿಂದ ಮಾರುಕಟ್ಟೆ ಆವರಣದಲ್ಲಿ ೧೦ಜ್ ಪೋಲೀಸ್ ಠಾಣೆ ಕಾರ್ಯ ನಿರ್ವಹಿಸುತ್ತಿದೆ. ಈ ಮಾರುಕಟ್ಟೆ ಪ್ರದೇಶಕ್ಕೆ ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ಒಬ್ಬ ಹೆಡ್ ಕಾನ್ಸ್‌ಟೇಬಲ್, ಮತ್ತು ಐವರು ಪೋಲೀಸ್ ಕಾನ್ಸ್‌ಟೇಬಲ್‌ಗಳನ್ನು ನಿಯೋಜಿಸಲಾಗಿದೆ. ಈ ಸಿಬ್ಬಂದಿಯು ಅಲ್ಲಿ ನಡೆಯುವ ಕಳ್ಳತನಗಳನ್ನು ನಿಯಂತ್ರಿಸಲು ಹಾಗೂ ಅನುಮಾನಾಸ್ಪದ ಜನರನ್ನು ಹಿಡಿಯುವ ಕಾರ್ಯವನ್ನು ನಿರ್ವಹಿಸುತ್ತಿದ್ದು, ರಾತ್ರಿ ವೇಳೆಯಲ್ಲಿ ಗಸ್ತನ್ನು ನಿರಂತರವಾಗಿ ನಡೆಸುತ್ತಿದೆ ಇತ್ತೀಚೆಗೆ ಅಪರಾಧಗಳ ಪ್ರಮಾಣವು ಗಣನೀಯವಾಗಿ ಕಡಿಮೆಯಾಗಿದೆ. ಈ ಮಾರುಕಟ್ಟೆಯಲ್ಲಿ ನಡೆದ ಕಳ್ಳತನಗಳ ಸಂಖ್ಯೆ ಕೆಳಕಂಡಂತಿದೆ.

೧೯೮೬		೮ ಪ್ರಕರಣಗಳು
೧೯೮೭	...	೪ ಪ್ರಕರಣಗಳು
೧೯೮೮	...	೨ ಪ್ರಕರಣಗಳು